ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು,**
**ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ:-ಸಿ5(1).ಕ.ವಿಲೇ/01/2021-22 ದಿನಾಂಕ: 04-09-2021

:: ಸುತ್ತೋಲೆ ::

ವಿಷಯ:- ಸಾರ್ವಜನಿಕ ಶಿಕ್ಷಣ ಇಲಾಖೆಯ ಸೇವಾ ಸೌಲಭ್ಯಗಳ ಕುರಿತು ಸೆಪ್ಟಂಬರ್-2021ರ ಮಾಹೆಯನ್ನು ಕಡತಗಳ ಕಡತಯಜ್ಞ ಮಾಹೆಯನ್ನಾಗಿ ಆಚರಿಸುವ ಬಗ್ಗೆ.

ಉಲ್ಲೇಖ:-1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಮತ್ತು ಸಕಾಲ ಸಚಿವರ ಪತ್ರ ಸಂಖ್ಯೆ:- ಪಿಎಸ್ಇಎಸ್ಎಂ/44/2021-22 ದಿನಾಂಕ:02-09-2021.

2. ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ(ಆಸು)56ಕತವ.2021 ದಿನಾಂಕ:23-08-2021.
3. ಸರ್ಕಾರದ ಪತ್ರ ಸಂಖ್ಯೆ ಇಡಿ110.ಎಸ್ಒಹೆಚ್.2021 ದಿನಾಂಕ:03-09-2021.
4. ಈ ಕಛೇರಿ ಪತ್ರ ಸಂಖ್ಯೆ:ಸಿ5(1)ಬಾಕಿ.ಕ.ವಿ.01/2021-22 ದಿನಾಂಕ:25-08-2021.

***

ಮಾನ್ಯ ಸಚಿವರು, ಶಿಕ್ಷಕರ ದಿನಾಚಾರಣೆಯ ಸುಸಂಧರ್ಭದಲ್ಲಿ ವಿಲೇವಾರಿಗೆ ಬಾಕಿ ಇರುವ ಸೇವಾ ಸೌಲಭ್ಯಗಳ ಕಡತಗಳನ್ನು ಸೆಪ್ಟಂಬರ್-2021ರ ಮಾಹೆಯೊಳಗಾಗಿ "ಕಡತಯಜ್ಞ ಮಾಹೆ" ಆಚರಣೆ ಮಾಡುವ ಮೂಲಕ ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮಕೈಗೊಂಡು ಕಡತಗಳನ್ನು ವಿಲೇವಾರಿ ಮಾಡಿ, ಶಿಕ್ಷಕರ ದಿನಾಚಾರಣೆಯನ್ನು ಅರ್ಥಪೂರ್ಣವಾಗಿ ಆಚರಿಸುವ ಮೂಲಕ ಇಲಾಖೆಯ ಶಿಕ್ಷಕರು, ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಉಡುಗೊರೆ ನೀಡುವ ಇಚ್ಛೆ ವ್ಯಕ್ತಪಡಿಸಿ, ಎಲ್ಲಾ ಅಧಿಕಾರಿಗಳು ಸಹಕರಿಸುವಂತೆ ಸೂಚಿಸಿರುತ್ತಾರೆ.

ಸರ್ಕಾರದ ಉಲ್ಲೇಖ-3ರ ಪತ್ರದಲ್ಲಿ ಮಾನ್ಯ ಶಿಕ್ಷಣ ಸಚಿವರು ಸೂಚಿಸಿದಂತೆ ಸೆಪ್ಟಂಬರ್-5ರಂದು ಶಿಕ್ಷಕರ ದಿನಾಚರಣೆ ಇರುವುದರಿಂದ ಶಿಕ್ಷಕರಿಗೆ ಸಿಗಬೇಕಾದ ಸೇವಾ ಸೌಲಭ್ಯಗಳಾದ 10, 15, 20, 25 ವರ್ಷಗಳ ಕಾಲಮಿತಿ ವೇತನ ಬಡ್ತಿ, ಪ್ರೋಬೇಷನರಿ ಅವಧಿ ಘೋಷಣೆ, ಪ್ರಭಾರ ಭತ್ಯೆಗಳಿಗೆ ಸಂಬಂಧಿಸಿದ ಕಡತಗಳನ್ನು ಪರಿಶೀಲಿಸಿ, ಶಿಕ್ಷಕರ ದಿನಾಚರಣೆಯ ಒಳಗಾಗಿ ಮಂಜೂರು ಮಾಡಲು ಸೂಕ್ತ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಲಾಗಿದೆ.

ಸರ್ಕಾರದ ಉಲ್ಲೇಖ-1ರ ಸುತ್ತೋಲೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರ ನಿರ್ದೇಶನದಂತೆ ಇಲಾಖೆಯಲ್ಲಿ ಬಾಕಿ ಇರುವ ಕಡತಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಲು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲು ಆದೇಶಿಸಲಾಗಿದೆ.

1. ಒಂದು ವರ್ಷಕ್ಕೂ ಮೇಲ್ಪಟ್ಟು ಬಾಕಿ ಇರುವ ಎಲ್ಲಾ[ಶೇ.100 ರಷ್ಟು] ಕಡತಗಳನ್ನು ವಿಲೇವಾರಿ ಮಾಡಲು ಸೂಕ್ತಕ್ರಮ ಕೈಗೊಳ್ಳುವುದು.
2. ಆರು ತಿಂಗಳು ಮೇಲ್ಪಟ್ಟು ಬಾಕಿ ಇರುವ ಕಡತಗಳಲ್ಲಿ ಕ್ರಮವಹಿಸಿ ಶೇ.50ರಷ್ಟು ವಿಲೇವಾರಿ ಮಾಡುವುದು.
3. 30 ದಿನಗಳ ಮೇಲ್ಪಟ್ಟು ಯಾವುದೇ ಕ್ರಮವಾಗದೇ ಇರುವ ಕಡತಗಳ ಬಗ್ಗೆ ಕೂಡಲೇ ಕ್ರಮವಹಿಸುವುದು.

ಕಡತ ವಿಲೇವಾರಿಯ ಪರಿಶೀಲನೆಯನ್ನು ಮಾನ್ಯ ಮುಖ್ಯ ಮಂತ್ರಿಯವರು ಶೀಘ್ರದಲ್ಲಿ ನಡೆಸಲಿರುವುದರಿಂದ ಬಾಕಿ ಕಡತಗಳನ್ನು ವಿಲೇವಾರಿ ಮಾಡಿ ಬಾಕಿ ಕಡತಗಳ ಅಂಕಿ-ಅಂಶಗಳ ವರದಿಯನ್ನು ಸಲ್ಲಿಸುವಂತೆ ಉಲ್ಲೇಖ-4ರಲ್ಲಿ ತಿಳಿಸಲಾಗಿತ್ತು.

ಸಾರ್ವಜನಿಕ ಶಿಕ್ಷಣ ಇಲಾಖೆಯು ಇತರೆ ಇಲಾಖೆಗಳಿಗೆ ಮಾದರಿ ಇಲಾಖೆಯಾಗಿದ್ದು, ಮಾನ್ಯ ಸಚಿವರ ಆಶಯದಂತೆ ಹಾಗೂ ಸರ್ಕಾರದ ಆದೇಶದಂತೆ ಆಯಾಯಾ ಜಿಲ್ಲಾ ಉಪ ನಿರ್ದೇಶಕರ ಕಛೇರಿ ಹಾಗೂ ಅಧೀನ ಕಛೇರಿಗಳಲ್ಲಿ ಬಾಕಿ ಇರುವಂತಹ ಕಡತಗಳನ್ನು ನಿಯಮಾನುಸಾರ ತ್ವರಿತ ವಿಲೇವಾರಿಗೆ ಕ್ರಮಕೈಗೊಳ್ಳುವ ಮೂಲಕ ಸೆಪ್ಟೆಂಬರ್-2021ರ ಮಾಹೆಯನ್ನು "ಕಡತಯಜ್ಞ ಮಾಹೆ"ಯನ್ನಾಗಿ ಅರ್ಥಪೂರ್ಣವಾಗಿ ಆಚರಿಸುವ ಮೂಲಕ ಸರ್ಕಾರದ ಆದೇಶ ಹಾಗೂ ಮಾನ್ಯ ಸಚಿವರ ಆಶಯವನ್ನು ಈಡೇರಿಸಲು ರಾಜ್ಯದ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುವಂತೆ ಈ ಮೂಲಕ ಸೂಚಿಸಿದೆ.

ರಾಜ್ಯದ ಎಲ್ಲಾ ಕಛೇರಿಯ ಮುಖ್ಯಸ್ಥರುಗಳು ಕಡತ ವಿಲೇವಾರಿ ಮಾಡಿದ ಪ್ರಗತಿ ವರದಿಯನ್ನು ನಿಗಧಿತ ಬಾಕಿ ಕಡತಗಳ ಅಂಕಿ-ಅಂಶ ನಮೂನೆಯಲ್ಲಿ ಮಾಹಿತಿಯನ್ನು ದಿನಾಂಕ:04-10-2021ರೊಳಗಾಗಿ ಈ ಕಛೇರಿಗೆ ತಪ್ಪದೇ ಸಲ್ಲಿಸಲು ತಿಳಿಸಿದೆ.

ವಿ.ಅನ್ಬುಕುಮಾರ್., ಭಾ.ಆ.ಸೇ.,
ಆಯುಕ್ತರು.

ಇವರಿಗೆ,

1. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ ಬೆಂಗಳೂರು.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ / ಧಾರವಾಡ ಇವರುಗಳ ಅಗತ್ಯ ಕ್ರಮಕ್ಕಾಗಿ,
3. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳ ಅಗತ್ಯ ಕ್ರಮಕ್ಕಾಗಿ,
4. ಜಂಟಿ ನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ ಬೆಂಗಳೂರು
5. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹ ನಿರ್ದೇಶಕರುಗಳ ಅಗತ್ಯ ಕ್ರಮಕ್ಕಾಗಿ,
6. ರಾಜ್ಯದ ಎಲ್ಲಾ ಉಪ ನಿರ್ದೇಶಕರು(ಆಡಳಿತ), (ಅಭಿವೃದ್ಧಿ) ಇವರುಗಳ ಸೂಕ್ತ ಕ್ರಮಕ್ಕಾಗಿ, (ಜಿಲ್ಲಾ ಹಂತದಲ್ಲಿ ಮಾಹಿತಿ ಕ್ರೂಢೀಕರಿಸುವುದು)
7. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಅಗತ್ಯ ಕ್ರಮಕ್ಕಾಗಿ,
8. ಈ ಕಛೇರಿಯ ಎಲ್ಲಾ ಶಾಖಾಧಿಕಾರಿಗಳು ಹಾಗೂ ಅಧೀಕ್ಷಕರುಗಳಿಗೆ,
9. ಇಲಾಖಾ ವೆಬ್‌ಸೈಟ್‌ಗೆ.

ಪ್ರತಿಯನ್ನು:-

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) ಕರ್ನಾಟಕ ಸರ್ಕಾರದ ಸಚಿವಾಲಯ ಬೆಂಗಳೂರು- ಇವರಿಗೆ ಮಾಹಿತಿಗಾಗಿ.
2. ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಮತ್ತು ಸಕಾಲ ಸಚಿವರ ಆಪ್ತ ಕಾರ್ಯದರ್ಶಿಗಳು. ವಿಧಾನಸೌಧ, ಬೆಂಗಳೂರು – ಈ ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತರಲು ಕೋರಲಾಗಿದೆ.
3. ಕಛೇರಿ ಪ್ರತಿ.